

**ತನಗಿಂತ ಒಂದೆಂಟು ತಿಂಗ್ಳು ದೊಡ್ಡವಳಿದ್ದರೂ ಇರಲಿ ಎಂದು ಮೆಚ್ಚಿ ಮದುವೆಯಾಗಿದ್ದ ತಂಗ್ಳ. ಪತ್ನಿಯ ಟೀವಿ ಹಾಗೂ ಮೊಬೈಲ್‌ನ ಹುಚ್ಚಿಗೆ ಮನೆಯಲ್ಲಿ ಬಿರುಗಾಳಿ ಎದ್ದಿತ್ತು. ದೂಳೆಬ್ಬಿಸುತ್ತ ಬಂದ ಕಾರು ಕಣ್ಣ ಮುಂದೆಯೇ ಹೆಂಡತಿಯನ್ನು ಹೊತ್ತು ಹೊರಟೇ ಬಿಟ್ಟಿತ್ತು...**

ರೌಂಡ್ ಕೆಳಗಿನ ಹೊಲ್ತಾಕೆ ಹೋಗಿ ಬಂದು ಹಿತ್ತಾಳೆ ಗಂಗಾಳದಲ್ಲಿ ರಾತ್ರಿಯ ತಂಗಳನ್ನು ಹಾಕಿಕೊಂಡು ಉಂಡರೆ ಅಲ್ಲಿಗೆ ರಂಗಶ್ಯಾಮಣ್ಣನ ಮಗ ಮಂಜಣ್ಣ ಉರೂಫ್ ತಂಗ್ಳನ ದಿನದ ಮೊದಲ ಅಧ್ಯಾಯ ಮುಗಿದಂತೆಯೇ.

ಹೋರಿನಿಂಗಮ್ಮಜ್ಜಿ ಕೇರಿಯ ರಂಗಶ್ಯಾಮಣ್ಣನ ಒಬ್ಬಾನೊಬ್ಬನೇ ಮಗ ಮಂಜಣ್ಣ ಬುದ್ಧಿ ತಿಳಿದಾಗಿನಿಂದಲೂ ಬೆಳಗ್ಗೆ ಅಷ್ಟೊತ್ತಿಗೇ ಗಂಗಾಳದಲ್ಲಿ ತಂಗಳು ಹಿಟ್ಟನ್ನೋ, ತಂಗಳು ಅನ್ನವನ್ನೋ ಹಾಕಿಕೊಂಡು ಸಾರಿದ್ದರೆ ಸಾರು ಇಲ್ಲದಿದ್ದರೆ ಮೊಸರು ಹಾಕಿಕೊಂಡು ಜಡಿದು ಢರ್ ಅಂತ ತೇಗುತ್ತಿದ್ದ. ತಂಗಳು ಇಲ್ಲದಿದ್ದ ದಿನ ಅತ್ತು ರಂಪಾಟ ಮಾಡುತ್ತಿದ್ದ. ಹಾಗಾಗಿ ಅವನ ಹತ್ರ ಯೆತ್ಲ್ ಮಲಾಮತ್ತಿದ್ದಾತು ಅಂತ ಅಮ್ಮ ಮುದ್ದನುಮಕ್ಕ ರಾತ್ರಿ ಹೊತ್ತು ಒಂದು ಮುದ್ದೆ ಜಾಸ್ತಿ, ಒಂದು ಚಟಾಕು ಅಕ್ಕಿ ಜಾಸ್ತಿ ಹಾಕಿ ಅನ್ನ ಮಾಡಿ ಮಣ್ಣಿನ ಮಡಕೆಯಲ್ಲಿ ಹಾಕಿ, ಮುಚ್ಚಳ ಮುಚ್ಚಿ ಇಲಿ, ಬೆಕ್ಕುಗಳಿಗೆ ಸಿಗದಿರಲಿ ಅಂತ ನೆಲುವುಗೆ ತೂಗಾಕುತ್ತಿದ್ದಳು. ಒಂಬತ್ತನೇ ಕ್ಲಾಸು ಫೇಲಾಗಿ ಸ್ಕೂಲ್ ಬಿಡೋಗಂಟ್ಲೂ ತಂಗಳುಂಡೆ ಸ್ಕೂಲಿಗೆ ಹೋಗುತ್ತಿದ್ದವನು ಸ್ಕೂಲು ಬಿಟ್ಟು ಬೇಸಾಯಕ್ಕೆ ಧುಮುಕಿದ ಮೇಲೂ ಅದೇ